ಮುಖ್ಯ ಕಾರ್ಯದರ್ಶಿಯವರ ಕಾರ್ಯಾಲಯ, ಕರ್ನಾಟಕ ಸರ್ಕಾರ.

**CHIEF SECRETARY'S OFFICE, GOVT. OF KARNATAKA.**

ಸಂಖ್ಯೆ:ಸಿಆಸುಇ 112 ಇಜಿವಿ 2016 ದಿನಾಂಕ:20.08.2016

## ಸುತ್ತೋಲೆ

JD (Plan)/SPS/E-Gov

ವಿಷಯ: ಇ-ಸಂಗ್ರಹಣಾ ವೇದಿಕೆ (e-Procurement Portal) ಬಳಕೆ.

ಉಲ್ಲೇಖ: ಸರ್ಕಾರದ ಅಧಿಸೂಚನೆ ಸಂಖ್ಯೆ; ಸಿಆಸುಇ 2 ಇಸಂಗ್ರ 2009, ದಿನಾಂಕ 09ನೇ ಅಕ್ಟೋಬರ್ 2012.

*****

03 ಡಿಸೆಂಬರ್ 2012ರಿಂದ ಜಾರಿಗೆ ಬರುವಂತೆ, ಕರ್ನಾಟಕ ಸರ್ಕಾರದ ಅಧೀನದಲ್ಲಿ ಬರುವ ಎಲ್ಲಾ ಇಲಾಖೆ/ನಿಗಮ/ಸಂಸ್ಥೆ/ಮಂಡಳಿ/ನಿಕಾಯಗಳು 5 (ಐದು) ಲಕ್ಷಕ್ಕೂ ಮೀರಿದ ಎಲ್ಲಾ ಸಂಗ್ರಹಣೆಗಳನ್ನು ಇ-ಸಂಗ್ರಹಣಾ ವೇದಿಕೆ ಮೂಲಕ ಕೈಗೊಳ್ಳಲು ಉಲ್ಲೇಖಿತ ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಇದರಂತೆ ಟೆಂಡರ್ ಪ್ರಕಟಣೆ ಹಾಗೂ ತೆರೆಯುವಿಕೆವರೆಗೆ ಮಾತ್ರ ಕೆಲವೊಂದು ಟೆಂಡರ್ ಅಹ್ವಾನಿಸುವ ಹಾಗೂ ಟೆಂಡರ್ ಅನುಮೋದನೆಯ ಪ್ರಾಧಿಕಾರಗಳು ಇ-ಸಂಗ್ರಹಣಾ ವೇದಿಕೆ ಬಳಸಿಕೊಂಡಿದ್ದು, 2009 ರಿಂದ ಇಂದಿನವರೆಗೆ ಸುಮಾರು 20,000 ಗಳಿಗೂ ಅಧಿಕ ಟೆಂಡರ್‌ಗಳು ಇ-ಸಂಗ್ರಹಣಾ ವೇದಿಕೆಯಲ್ಲಿ ಉಳಿದಿರುವುದು ಕಂಡುಬರುತ್ತಿದೆ. ಈ ವಿವರಗಳು ಇ-ಸಂಗ್ರಹಣಾ ವೇದಿಕೆಯಲ್ಲಿ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಿದೆ. ಟೆಂಡರ್ ಸಿಂಧುತ್ವಾವದಿ ಮುಗಿದ ನಂತರವು ಟೆಂಡರ್‌ಗಳನ್ನು ಇ-ಸಂಗ್ರಹಣಾ ವೇದಿಕೆಯ ಆನ್‌ಲೈನ್‌ನಲ್ಲಿ ಬಾಕಿ ಉಳಿಸಿಕೊಂಡಿರುವುದನ್ನು ಗಂಭೀರವಾಗಿ ಪರಿಗಣಿಸಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಸಕ್ಷೆನ್ 9 ರಲ್ಲಿ ನಮೂದಾದ ಎಲ್ಲಾ ಟೆಂಡರ್ ಅನುಮೋದನಾ ಪ್ರಾಧಿಕಾರಗಳು ಟೆಂಡರ್‌ಗಳನ್ನು ಸಿಂಧುತ್ವಾವದಿ ಮುಕ್ತಾಯವಾಗುವುದರೊಳಗಾಗಿ ನಿರ್ಣಯ ಕೈಗೊಳ್ಳಬೇಕೆಂದು ಹಾಗೂ ಬಾಕಿ ಉಳಿಸಿಕೊಂಡಿರುವ ಹಳೆಯ ಟೆಂಡರ್‌ಗಳನ್ನು ಮುಂದಿನ ಒಂದು ತಿಂಗಳಿನೊಳಗಾಗಿ ಆನ್‌ಲೈನ್‌ನಲ್ಲಿ ನಿರ್ಣಯಗಳನ್ನು ಅಳವಡಿಸಿ ಮುಕ್ತಾಯಗೊಳಿಸಲು ಸೂಚಿಸಿದೆ. ಮುಂದುವರಿದಂತೆ ಎಲ್ಲ ಟೆಂಡರುದಾರರ ಮುಂಗಡ ಠೇವಣಿಯನ್ನು ನಿಯಮಿತಾವಧಿಯಲ್ಲಿ ಹಿಂದಿರುಗಿಸುವುದು ಟೆಂಡರ್ ಅಹ್ವಾನಿಸುವ ಪ್ರಾಧಿಕಾರದ ಜವಾಬ್ದಾರಿಯಾಗಿರುತ್ತದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ನಿಯಮಿಸಿದ ಮೇಲ್ಮನವಿ (ಅಪೀಲು) ಪ್ರಾಧಿಕಾರವೂ ಸಹ ಎಲ್ಲಾ ಅಪೀಲುಗಳನ್ನು ನಿಯಮಿತಾವಧಿಯಲ್ಲಿ ನಿರ್ಣಯಿಸಬೇಕು.

ಮೇಲಿನಂತೆ ಕ್ರಮ ಜರುಗಿಸದ ಟೆಂಡರ್ ಅನುಮೋದನಾ ಪ್ರಾಧಿಕಾರ ಹಾಗೂ ಟೆಂಡರ್ ಅಹ್ವಾನಿಸುವ ಪ್ರಾಧಿಕಾರ ಇವರುಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ಸಕ್ಷೆನ್ 23ರಂತೆ ದಂಡನೆಗೆ ಒಳಪಡುತ್ತಾರೆ ಎಂಬುದನ್ನು ಗಮನಕ್ಕೆ ತರಲಾಗಿದೆ.

ಈ ವಿಷಯದ ಬಗ್ಗೆ ಸರ್ಕಾರದ ಇಲಾಖಾ ಮಟ್ಟದ ಸಭೆಯಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಪ್ರಸ್ತಾಪಿಸಿ ಸೂಚಿಸಿದಂತೆ ಕ್ರಮ ಜರುಗುತ್ತಿರುವ ಬಗ್ಗೆ ಪರಿಶೀಲಿನೆ ನಡೆಸುವುದು.

20.8.2016

(ಅರವಿಂದ ಜಾಧವ್)

ಸರ್ಕಾರದ ಮುಖ್ಯ ಕಾರ್ಯದರ್ಶಿ

ಗೆ:

1) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
2) ಎಲ್ಲಾ ಇಲಾಖೆಗಳ ಮುಖ್ಯಸ್ಥರುಗಳು, ಮುಂದಿನ ಸೂಕ್ತ ಕ್ರಮಕ್ಕಾಗಿ.
3) ಎಲ್ಲಾ ಜಿಲ್ಲಾಧಿಕಾರಿಗಳು, ಮುಂದಿನ ಸೂಕ್ತ ಕ್ರಮಕ್ಕಾಗಿ.
4) ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ, ಮುಂದಿನ ಸೂಕ್ತ ಕ್ರಮಕ್ಕಾಗಿ.
5) ಸರ್ಕಾರದ ಎಲ್ಲಾ ನಿಗಮ/ಸಂಸ್ಥೆ/ಮಂಡಳಿ/ನಿಕಾಯಗಳು, ಮುಂದಿನ ಸೂಕ್ತ ಕ್ರಮಕ್ಕಾಗಿ.

PS-899 17/9/16

ಕೊಠಡಿ ಸಂಖ್ಯೆ:320, 3ನೇ ಮಹಡಿ, ವಿಧಾನಸೌಧ, ಬೆಂಗಳೂರು – 01.
Room No.320, 3rd Floor, Vidhana Soudha, Bangalore – 01.
Ph: 22252442, 22253716 Fax:22258913 E-mail: cs@karnataka.gov.in

ಹಿಂಬರಹ ಸಂಖ್ಯೆ : ಡಿಟಿಇ 02 ಇ-ಆಡಳಿತ 2016 ದಿನಾಂಕ: 19/09/2016

ಮೇಲ್ಕಂಡ ಸರ್ಕಾರಿ ಸುತ್ತೋಲೆಯನ್ನು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಈ ಕೆಳಕಂಡವರಿಗೆ ಕಳುಹಿಸಲಾಗಿದೆ.

1. ಈ ಇಲಾಖೆಗೆ ಅಧೀನಕ್ಕೊಳಪಡುವ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಹಾಗೂ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಿನ್ಸಿಪಾಲರುಗಳಿಗೆ ಮುಂದಿನ ಕ್ರಮಕ್ಕಾಗಿ.
2. ಈ ನಿರ್ದೇಶನಾಲಯದ ಎಲ್ಲಾ ಜಂಟಿ ನಿರ್ದೇಶಕರು ಪರೀಕ್ಷೆ, ಆಡಳಿತ, ಯೋಜನೆ, ಸಹಾಯಕ ನಿರ್ದೇಶಕರು-ಎಸಿಐಎಂ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
3. ನಿರ್ದೇಶನಾಲಯದ ಇಎಸ್‌ಟಿ (6), ಎಸ್‌ಪಿಎಸ್ (1) ಹಾಗೂ (2) ವಿಭಾಗಕ್ಕೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

ನಿರ್ದೇಶಕರು